<u>ದಿನಾಂಕಃ 07-03-2026 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-</u>

ನಾನು ಟೈಲರಿಂಗ್, ಹ್ಯಾಂಪರ್ ಮತ್ತು ವೈರಿಂಗ್ ಬ್ಯಾಕ್ ಸೀಟ್ ಹಾಕುವ ಕೆಲಸ ಮಾಡುತ್ತೇನೆ. ಸುಮಾರು 20 ರಿಂದ 25 ವರ್ಷಗಳಿಂದ ನಾನು ಸದರಿ ಕೆಲಸವನ್ನು ಮಾಡುತ್ತಾ ಬಂದಿರುತ್ತೇನೆ. ನನಗೆ ಕೆನರಾ ಬ್ಯಾಂಕ್ ನಲ್ಲಿ ಖಾತೆ ಇರುತ್ತದೆ. ಸದರಿ ಬ್ಯಾಂಕ್ ಖಾತಾ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನನಗೆ ಸಾಲ ಇರುವುದಿಲ್ಲ. ನನಗೆ ಸ್ವಂತ ಮನೆ ಇರುತ್ತದೆ. ಜಮೀನು ಇರುವುದಿಲ್ಲ. ನನಗೆ ಬಿ.ಪಿ.ಎಲ್ ಕಾರ್ಡ್ ಇರುವುದಿಲ್ಲ. ನನಗೆ ಯಾವುದೂ ಕಾರ್ಡ್ ಇರುವುದಿಲ್ಲ. ನಾನು ಬಿ.ಪಿ.ಎಲ್ ಕಾರ್ಡ್ ಹೋಲ್ಡರ್ ಆಗಿದ್ದುದರಿಂದ ಯಾವುದೇ ಕಾರ್ಡ್ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಹಾಗೂ ಆರೋಪಿಯ ನಡುವಿನ ವ್ಯವಹಾರ ನಮ್ಮ ಮನೆಯಲ್ಲಿ ನಡೆದಿರುತ್ತದೆ. ಆರೋಪಿಗೆ ಹಣವನ್ನು ನಾನು ನಮ್ಮ ಮನೆಯಲ್ಲಿ ನೀಡಿರುತ್ತೇನೆ. ಆರೋಪಿಯು ಆಗಾಗ ಬಂದು ನನ್ನ ಬಳಿ ಹಣವನ್ನು ತೆಗೆದುಕೊಂಡು ಹೋಗುತ್ತಿದ್ದರು. ಎಷ್ಟು ಬಾರಿ ಬಂದಿರುತ್ತಾರೆ ಎಂದು ಹೇಳಲು ನನಗೆ ಆಗುವುದಿಲ್ಲ. ಆರೋಪಿಯು 15 ಲಕ್ಷ ಹಣವನ್ನು ಒಮ್ಮೆಲೆ ತೆಗೆದುಕೊಂಡಿರುವುದಿಲ್ಲ, ಸ್ವಲ್ಪ ಸ್ವಲ್ಪವಾಗಿ ತೆಗೆದುಕೊಂಡಿರುತ್ತಾರೆ. ಆರೋಪಿಗೆ ನೀಡಿದ ನೋಟೀಸ್ ನಲ್ಲಿ ಆರೋಪಿ ನನ್ನಿಂದ ಸ್ವಲ್ಪ ಸ್ವಲ್ಪವಾಗಿ ತೆಗೆದುಕೊಂಡಿರುವ ಬಗ್ಗೆ ಹೇಳಿರುತ್ತೇನೆ. 2022 ರಿಂದ 2025 ರವರೆಗೆ ಆರೋಪಿ ಹಾಗೂ ನನ್ನ ನಡುವೆ ವ್ಯವಹಾರ ಆಗಿರುತ್ತದೆ. ಈ ಬಗ್ಗೆ ನಾನು

ನನ್ನ ನೋಟೀಸ್ ನಲ್ಲಿ ಹೇಳಿರುತ್ತೇನೆ. ನಾನು 8 ನೇ ತರಗತಿಯವರೆಗೆ ಓದಿರುತ್ತೇನೆ.

ಆರೋಪಿಯು ಚೆಕ್ಕಿನಲ್ಲಿ ಬರವಣಿಗೆಯನ್ನು ಅವರೇ ಮಾಡಿಕೊಂಡು ನನ್ನ ಮನೆಯಲ್ಲಿ ನನಗೆ ನೀಡಿರುತ್ತಾರೆ. ಆರೋಪಿಯು ಏನು ಓದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯು ಬಟ್ಟೆ ವ್ಯಾಪಾರ ಮಾಡುತ್ತಾರೆ. ಆರೋಪಿಯು ಏಪ್ರಿಲ್ 2025 ರಲ್ಲಿ ನಿಪಿ-1 ಮತ್ತು 2 ಚೆಕ್ಕನ್ನು ನೀಡಿರುತ್ತಾರೆ. ನಾನು ನನ್ನ ಮಗಳಿಗೆ ಮದುವೆಗೆಂದು ಸ್ವಲ್ಪ ಸ್ವಲ್ಪ ಸೇರಿಸಿಟ್ಟ ಹಣವನ್ನು ಆರೋಪಿಗೆ ನೀಡಿರುತ್ತೇನೆ. ಆರೋಪಿಯು ನನಗೆ 25 ರಿಂದ 30 ವರ್ಷ ಚೆನ್ನಾಗಿ ಪರಿಚಯ ಇದ್ದುದರಿಂದ ನಾನು ಅವರಿಗೆ ಹಣವನ್ನು ನೀಡಿರುತ್ತೇನೆ. ಆರೋಪಿಯು ನನಗೆ ಅಷ್ಟು ವರ್ಷದಿಂದ  ಪರಿಚಯ ಇರುವ ಬಗ್ಗೆ ನನ್ನ ನೋಟೀಸ್ ನಲ್ಲಿ ತಿಳಿಸಿರುತ್ತೇನೆ.

ನಾನು ಆರೋಪಿಗೆ 500/- ರೂಪಾಯಿ ಮುಖಬೆಲೆಯ ಹಾಗೂ 100/- ರೂಪಾಯಿ ಮುಖಬೆಲೆಯ ನೋಟುಗಳನ್ನು ನೀಡಿರುತ್ತೇನೆ. ಆರೋಪಿ 2022 ರಿಂದ ನಾನು ಹಣವನ್ನು ನೀಡುತ್ತಾ ಬಂದಿರುತ್ತೇನೆ. 2022 ಕ್ಕಿಂತ ಪೂರ್ವದಲ್ಲಿ ಆರೋಪಿ ಹಾಗೂ ನನ್ನ ನಡುವೆ ವ್ಯವಹಾರ ಇರಲಿಲ್ಲ. ನಾನು ಆರೋಪಿಗೆ 15 ಲಕ್ಷ ಹಣವನ್ನು ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ 15 ಲಕ್ಷ ಹಣವನ್ನು ನೀಡಲು ನನಗೆ ಆರ್ಥಿಕ ಶಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಅಷ್ಟು ಆರ್ಥಿಕ ಶಕ್ತಿ ಇರುವ ಬಗ್ಗೆ ದಾಖಲಾತಿ ಹಾಜರುಪಡಿಸಬಹುದು. ಆರೋಪಿಯು ನನಗೆ ಗೂಗಲ್ ಪೇ ಮತ್ತು ಫೋನ್ ಪೇ ಮೂಲಕ

ರೂ.3,21,500/- ಹಣವನ್ನು ವಾಪಾಸ್ ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ನಾನು ಆರೋಪಿಗೆ ಒಟ್ಟು ರೂ.18,21,500/- ನ್ನು ನೀಡಿದ್ದು ಈ ಪೈಕಿ ಆರೋಪಿಯು ನನಗೆ ರೂ.3,21,500/- ನ್ನು ವಾಪಾಸ್ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ಶಾಜಿಯ ಕೋಂ ಮಹಮ್ಮದ್ ಯಾಸೀನ್ ನನಗೆ ಗೊತ್ತಿಲ್ಲ. ಅವರ ಪರಿಚಯ ನನಗೆ ಚೆನ್ನಾಗಿ ಇದ್ದರೂ ಕೂಡಾ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರ ಸಮಕ್ಷಮ ಆರೋಪಿಯು ನನಗೆ ನಗದಾಗಿ ರೂ.7,84,800/- ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ. ಆರೋಪಿಯು ಯಾವತ್ತೂ ನನ್ನಿಂದ 15 ಲಕ್ಷ ಹಣವನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಚೆಕ್ಕಿನ ಮೇಲೆ ಇರುವ ಬರವಣಿಗೆಯ ಇಂಕು ಹಾಗೂ ಸಹಿಯ ಇಂಕು ಬೇರೆ ಬೇರೆ ಇರುತ್ತದೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿಲ್ಲ, ಆರೋಪಿಯು ನನಗೆ ಸದರಿ ಚೆಕ್ಕನ್ನು ತಂದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಆರೋಪಿಯು ನನ್ನಿಂದ ಒಟ್ಟು 10 ಲಕ್ಷವನ್ನು ಸಾಲವಾಗಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಆರೋಪಿಯಿಂದ 2 ಚೆಕ್ಕುಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ದಿಃ09.09.2022 ರಿಂದ ದಿಃ12.03.2025 ರವರೆಗೆ ಆರೋಪಿಯು ನನಗೆ ಬಡ್ಡಿಯನ್ನು ಬಿಟ್ಟು ಒಟ್ಟು 10 ಲಕ್ಷ ಹಣವನ್ನು ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಾಲ ಪಾವತಿಯಾದ ನಂತರ ಆರೋಪಿಯು ಬಹಳ ಸಾರಿ ಚೆಕ್ಕುಗಳನ್ನು ವಾಪಾಸ್ ನೀಡುವಂತೆ ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಸಂಬಂಧ

C.C.No.1699/2025
PW-1

ಆರೋಪಿಯು ನನ್ನ ಮೇಲೆ ದೂರನ್ನು ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ಸುಳ್ಳು ದೂರನ್ನು ನೀಡಿರುತ್ತಾರೆ ಎನ್ನುತ್ತಾರೆ. ನಾನು ಠಾಣೆಯಲ್ಲಿ ಬಡ್ಡಿ ವ್ಯವಹಾರ ಮಾಡುವುದಿಲ್ಲ ಎಂದು ಒಪ್ಪಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುತ್ತೇನೆ ಎಂದು ಠಾಣೆಯಲ್ಲಿ ಹೇಳಿ ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ರಾಜಕೀಯ ಪ್ರಭಾವವನ್ನು ಬಳಸಿ ಆರೋಪಿ ವಿರುದ್ಧ ಒಂದು ಸುಳ್ಳು ಪಿರ್ಯಾದನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಗಂಡನಿಗೆ ಬಟ್ಟೆ ಅಂಗಡಿ ಇರುತ್ತದೆ. ನನ್ನ ದುಡಿಮೆ ದೈನಂದಿನ ಖರ್ಚಿಗೆ ಮಾತ್ರ ಸಾಕಾಗುತ್ತದೆ ಎಂದರೆ ಸರಿಯಲ್ಲ. ಆರೋಪಿಯು ನನ್ನಿಂದ ಪಡೆದುಕೊಂಡ 10 ಲಕ್ಷ ಹಣಕ್ಕೆ ಭದ್ರತೆಯಾಗಿ ನೀಡಿದ 2 ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್‌ಆರ್ಃ

C.C.No.1699/2025
PW-1